SERVICE ABOVE SELF



2025-26

Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD

Rotary

Rtn. Francesco Arezzo
RI President 2025-26

| Rtn. K. Palaksha | Rtn. Anand R. | Rtn. Vishwas Y. | Rtn. M. Madhavachar |
|---|---|---|---|
| District Governor 2025-26 | President, Mob: 99800 93066 | Secretary, Mob : 99800 63180 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68    ಸಂಚಿಕೆ –44    ದಿನಾಂಕ : 20–05–2026

**ಮೇ ತಿಂಗಳ 3 ನೇ ವಾರದ ಸಭೆ. ಮೇ ತಿಂಗಳು ವಿಶ್ವದಾದ್ಯಂತ ಯುವಜನ ಸೇವಾ ಮಾಸ ಎಂಬುದಾಗಿ ರೋಟರಿಯು ಆಚರಿಸುತ್ತಿದ್ದು, ಈ ಸಂದರ್ಭದಲ್ಲಿ ಮಲ್ನಾಡ್ ರೋಟರಾಕ್ಟ್ ಕ್ಲಬ್ ಎಲೈಟ್ ಮತ್ತು ರೋಟರಿ ಕ್ಲಬ್ ಶಿವಮೊಗ್ಗ ಮಲ್ನಾಡ್ ಇವರೊಂದಿಗೆ ಜಂಟಿ ಸಭೆಯನ್ನು ಏರ್ಪಡಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಪ್ರೊಫೆಸರ್ ಎನ್. ದಿವಾಕರ್‌ರಾವ್, ಉಪಾಧ್ಯಕ್ಷರು, ಭಾರತೀಯ ವಿದ್ಯಾಭವನ, ಶಿವಮೊಗ್ಗ ಇವರು ಭಾಗವಹಿಸಿ ‘Youths in Rotary’ ಎಂಬ ವಿಚಾರವಾಗಿ ಮಾತನಾಡಿ ಯುವಕರಿಗೆ ಮುಂಬರುವ ದಿನಗಳಲ್ಲಿ ತಮ್ಮ ಜೀವನಕ್ಕೆ ರೋಟರಿಯಿಂದ ಯಾವ ರೀತಿ ಪ್ರೇರಣೆ ಕೊಡಬಹುದು ಎಂಬುದನ್ನು ಸವಿಸ್ತಾರವಾಗಿ ತಿಳಿಸಿದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ರೊ. ಆರ್. ಆನಂದ್, ಕಾರ್ಯದರ್ಶಿ ರೊ. ವಿಶ್ವಾಸ್ ಎಲಬುರ್ಗಿ, ರೋಟರಿ ಕ್ಲಬ್, ಮಲ್ನಾಡ್ ಅಧ್ಯಕ್ಷರಾದ ರೊ. ಪ್ರಕಾಶ್ ಮೂರ್ತಿ, ಕಾರ್ಯದರ್ಶಿ ರೊ. ರಶ್ಮಿ, ರೋಟರಾಕ್ಟ್ ಕ್ಲಬ್ ಎಲೈಟ್‌ನ, ಅಧ್ಯಕ್ಷರಾದ ರೊ. ಯಶವಂತ್‌ರವರು ವೇದಿಕೆಯಲ್ಲಿದ್ದರು. ನಮ್ಮ ಕ್ಲಬ್‌ನ ಸಾರ್ಜೆಂಟ್ ರೊ.ಎಸ್. ಮಂಜುನಾಥರವರು ಅಧ್ಯಕ್ಷರಿಗೆ ಕಾಲರ್ ತೊಡಿಸಿ, ಸಭೆಗೆ ಚಾಲನೆ ನೀಡಿದರು.**













ಮಲ್ನಾಡ್ ರೋಟರಿ ಕ್ಲಬ್‌ನ ರೊ. ಪ್ರೀತಂರವರು ‘ವೇದ ವಂದಿತ ಆದಿ ಪೂಜಿತ ನಾಟ್ಯ ಲೋಲ ವಿನಾಯಕ’ ಎಂಬ ಹಾಡನ್ನು ಸುಶ್ರಾವ್ಯವಾಗಿ ಹಾಡಿ ಪ್ರಾರ್ಥನೆಯನ್ನು ಮಾಡಿದರು. ರೊ. ಪಿಎಜಿ. ಸುನೀತಾ ಶ್ರೀಧರ್‌ರವರು ಸರ್ವರನ್ನು ಸ್ವಾಗತಿಸಿದರು. ಯುವಜನತೆಗಾಗಿ ನಾಯಕತ್ವದ ಅರಿವು ಮೂಡಿಸಲು ಈ ಕಾರ್ಯಕ್ರಮವನ್ನು ಆಯೋಜಿಸಿದ್ದು, ಅದಕ್ಕಾಗಿ ರೋಟರಾಕ್ಟ್ ಕ್ಲಬ್‌ನ ಸದಸ್ಯರುಗಳಿಗೂ ಸಹ ಆಹ್ವಾನಿಸಲಾಗಿದೆ ಎಂದರು. ಇದೇ ಸಂದರ್ಭದಲ್ಲಿ ಇತ್ತೀಚೆಗೆ ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಂಡ ರೊ. ವೈ.ವಿ. ವೆಂಕಟರಮಣ ಜೋಯ್ಸ್, ರೊ.ಪೇಟೆ ಅಜಯ್‌ಕುಮಾರ್, ರೊ.ಟಿ.ಆರ್.ಅಶ್ವಥನಾರಾಯಣ್ ಮತ್ತು ಮಲ್ನಾಡ್ ಕ್ಲಬ್‌ನ ರೊ. ಹೆಚ್.ಎಲ್. ರವಿಯವರನ್ನು ವೇದಿಕೆಗೆ ಆಹ್ವಾನಿಸಿ ನೆನಪಿನ ಕಾಣಿಕೆಗಳನ್ನು ನೀಡಿ, ಕೇಕ್ ಕಟ್ ಮಾಡುವುದರೊಂದಿಗೆ ಹುಟ್ಟು ಹಬ್ಬದ ಶುಭಾಶಯ ಕೋರಲಾಯಿತು. ಅಂದು ಉಪಹಾರದ ಪ್ರಾಯೋಜಕತ್ವವನ್ನು ವಹಿಸಿಕೊಂಡಿದ್ದ ರೊ.ಟಿ.ಆರ್. ಅಶ್ವಥನಾರಾಯಣರವರು ನಮ್ಮ ರೋಟರಿಗೆ ಸೇರಿ 50 ವರ್ಷಗಳು, ಜೊತೆಗೆ ಹುಟ್ಟು ಹಬ್ಬದ ಆಚರಣೆಗೆ ಅವರ ಪತ್ನಿ ಶ್ರೀಮತಿ ಪ್ರಭಾ ಅಶ್ವಥನಾರಾಯಣ, ಮಕ್ಕಳಾದ ಶ್ರೀ ಬದರಿಪ್ರಸಾದ್ ಮತ್ತು ಜ್ಯೋತಿ ಜೊತೆಗಿದ್ದರು.

## ಈ ವಾರದ ಸಭೆ

**ದಿನಾಂಕ: 27–5–2026, ಬುಧವಾರ**    **ಸಂಜೆ 6:45 ರಿಂದ**

**ಅತಿಥಿ :**

## ಕುಮಾರ ನವನೀತರಾಜ್

ವಾಯ್ಸ್ ಆಫ್ ಶಿವಮೊಗ್ಗ, ರನ್ನರ್ ಅಪ್–1

**ವಿಷಯ :**

## ಸಂಗೀತ ರಸಮಂಜರಿ

**ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ**

ಸ್ಥಳ: **ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ





























ಇದೇ ಸಂದರ್ಭದಲ್ಲಿ ರೋಟರಾಕ್ಟ್ ಎಲೈಟ್ ಕ್ಲಬ್‌ನ ಅಧ್ಯಕ್ಷರಾದ ಶ್ರೀ ಯಶವಂತರವರು ಮಾತನಾಡಿ, ರೋಟರಾಕ್ಟ್ ಸೇರಿದ ಮೇಲೆ ತಮಗಾದ ಅನುಭವ, ಪ್ರೇರಣೆ ಮತ್ತು ಸಮಾಜದಲ್ಲಿ ತಮ್ಮನ್ನು ತಾವು ಮಿಳಿತ ಗೊಳಿಸಿಕೊಂಡ ಅನುಭವಗಳು ಅದು ತಮಗೆ ಹೇಗೆ ಸಹಾಯವಾಯಿತು ಎಂಬುದನ್ನು ವಿವರಿಸಿದರು. ಸಮುದಾಯ ಸೇವೆಗಳ ಪ್ರಾಜೆಕ್ಟ್‌ಗಳನ್ನು ಹಮ್ಮಿಕೊಳ್ಳಲು ಧೈರ್ಯವೂ ಬಂತು ಎಂದರು. ಜೊತೆಗೆ ಸಹ್ಯಾದ್ರಿ ರೋಟರಾಕ್ಟ್ ಕ್ಲಬ್‌ನ ರವಿಕುಮಾರ್ ಎಂ. ಇವರೂ ಸಹ ಮಾತನಾಡಿ ನಮ್ಮದು ನಾಲ್ಕು ವರ್ಷದ ಕ್ಲಬ್, ಕುಂಟುತ್ತಾ ಸಾಗಿದ್ದೇವೆ. ಇನ್ನೂ ನಾವು ರೋಟರಾಕ್ಟ್ ಸದಸ್ಯರ ಸಂಖ್ಯೆ ಜಾಸ್ತಿ ಮಾಡಬೇಕು ಎನ್ನುತ್ತಾ, ಇಂದು ರೋಟರಿ ದಿಗ್ಗಜರುಗಳು ಆಚರಿಸಿಕೊಂಡ ಹುಟ್ಟು ಹಬ್ಬವು ತಮಗೆ ಸಂತಸತಂದಿದೆ ಎಂದರು. ಈ ಕಾರ್ಯಕ್ರಮಕ್ಕೆ ತಮ್ಮನ್ನು ಆಹ್ವಾನಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸಿದರು. ಮಲ್ನಾಡ್ ರೋಟರಿಯ ಪ್ರಕಾಶ್‌ಮೂರ್ತಿಯವರೂ ಸಹ ಈ ಸಂದರ್ಭದಲ್ಲಿ ರೋಟರಿಯ ಬಗ್ಗೆ ಅದರ ಸೇವೆಗಳ ಬಗ್ಗೆ ಮಾತನಾಡಿದರು.

ರೊ. ಶಾರದಾ ಗೋಪಾಲ್‌ರವರು ಶಿವಮೊಗ್ಗ ವಿನಾಯಕ ನಗರದಲ್ಲಿನ ಕನ್ನಿಕಾ ಮಹಿಳಾ ಸಂಘಕ್ಕೆ ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ. ಹಾಗೂ ರೊ. ವೈ.ವಿ. ವೆಂಕಟರಮಣ ಜೋಯ್ಸ್‌ರವರು 3 ನೇ ಬಾರಿಗೆ ಪಿಹೆಚ್‌ಎಫ್ ಆಗಿದ್ದು ಅವರುಗಳಿಗೆ ರೊ.ಪಿಡಿಜಿ. ಡಾ.ಆರ್.ಡಿ.ಪ್ರಭುರವರು ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ರೊ.ಪಿಡಿಜಿ. ಹೆಚ್.ಎಲ್.ರವಿಯವರೂ ಸಹ ವೇದಿಕೆಯಲ್ಲಿದ್ದರು.

ಮಾಜಿ ಅಧ್ಯಕ್ಷರಾದ ರೊ.ಕಿಶೋರ್ ಶೀರನಾಳಿಯವರು ಮುಖ್ಯ ಅತಿಥಿಗಳಾದ ಪ್ರೊ.ಎನ್. ದಿವಾಕರರಾವ್‌ರವರನ್ನು ಸಭೆಗೆ ಪರಿಚಯ ಮಾಡಿದರು. ದಾವಣಗೆರೆ ಜಿಲ್ಲೆ ಮಲೆಬೆನ್ನೂರಿನಲ್ಲಿ ಜನಿಸಿದ ಇವರು ತಮ್ಮ ವಿದ್ಯಾಭ್ಯಾಸವನ್ನು ದಾವಣಗೆರೆ ಮತ್ತು ಬೆಂಗಳೂರಿನಲ್ಲಿ ಪೂರೈಸಿದರು. ಸುರತ್ಕಲ್ ಪ್ರಾಂತೀಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ, ಕೆಇಬಿಯಲ್ಲಿ ಇಂಜಿನಿಯರ್ ಆಗಿ ಮತ್ತು ಮಾನವ ಸಂಪನ್ಮೂಲ ಇಲಾಖೆಯಲ್ಲಿ ಹಿರಿಯ ತರಬೇತುದಾರರಾಗಿ, ಕಾರ್ಯ ನಿರ್ವಹಿಸುತ್ತಾ, ರಾಮಗುಂಡಂ,

**ನೀವು ಅತ್ಯುತ್ತಮ ರೋಟರಿ ಸದಸ್ಯರೆಂದಾದರೆ ಪ್ರತಿ ವಾರದ ಸಭೆಗೆ ತಪ್ಪದೇ ಬನ್ನಿ**







ಹೈದರಾಬಾದ್, ತುಮಕೂರಿನ ಸಿದ್ಧಗಂಗಾ ಮಠದ ಕಾಲೇಜಿನಲ್ಲಿ, ಶಿವಮೊಗ್ಗೆಯ ಜೆ.ಎನ್.ಎನ್.ಸಿ.ಯಲ್ಲಿ ಹಲವಾರು ಘೋರಂಗಳಲ್ಲಿ ಹಾಗೂ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಾ ಹಾಲಿ ಭಾರತೀಯ ವಿದ್ಯಾಭವನದ ಉಪಾಧ್ಯಕ್ಷರಾಗಿದ್ದಾರೆ. ಸಾಹಿತ್ಯದ ಅಧ್ಯಯನ, ನಿರ್ಮಾಣ ಶ್ರೀಯುತರ ಹವ್ಯಾಸವಾಗಿದ್ದು, ಮೂರು ಕವನ ಸಂಕಲನಗಳನ್ನು ಪ್ರಕಟಿಸಿರುತ್ತಾರೆ. ಶಿಕ್ಷಣ ತಜ್ಞರಾಗಿ ಬರಹಗಾರರಾಗಿ ಕಲಾಪೋಷಕರಾಗಿ, ಉತ್ತಮ ಭಾಷಣಕಾರರಾಗಿದ್ದಾರೆ.

ಪ್ರೊ.ಎನ್. ದಿವಾಕರರಾವ್‌ರವರು ಮಾತನಾಡಿ ರೋಟರಿಯಲ್ಲಿ ಯುವ ಜನತೆ ಎಂಬ ವಿಷಯವಿದೆ. ಆದರೆ ಇಲ್ಲಿ ಎಲ್ಲಾ ಹಿರಿಯ ಯುವಜನ ಸದಸ್ಯರುಗಳೇ ಇದ್ದೀರಿ. ನಿಮ್ಮ ಅನುಭವಗಳಿಂದ ಯುವಜನತೆಗೆ ರೋಟರಿ ಆಕರ್ಷಣೀಯವಾಗಲು ಏನು ಮಾಡಬೇಕು ಎಂಬುದನ್ನು ನಾವು ಇಂದಿನ ದಿನಗಳಲ್ಲಿ ಮನಗಾಣಬೇಕಾಗಿದೆ ಎಂದರು. ಎಲ್ಲರ ಉಪಯೋಗಕ್ಕಾಗಿ ಬಳಸಬೇಕಂತೆ ಎಂದು ಹೂವು ಕೇಳುತ್ತವಂತೆ. ಹಾಗೆಯೇ ನಾನು ಸಮಾಜಕ್ಕಾಗಿ ಏನು ಮಾಡಬಲ್ಲೆ ಎನ್ನುವುದು ಯುವಕರ ಅರಿವಿಗೆ ಬರಬೇಕು. ವಿದ್ಯಾಭ್ಯಾಸ ಮುಗಿಯಿತು. ಒಳ್ಳೆ ಸಂಬಳ ಬರುತ್ತಿದೆ. ಐಷಾರಾಮಿ ಜೀವನ ಮಾಡುವುದು. ಇವೆಲ್ಲವೂ ಬೇರೆ. ಆದರೆ ಸಮಾಜಕ್ಕೆ ಏನು ಮಾಡಿದ್ದೀರಿ. ಕುಟುಂಬದೊಂದಿಗೆ ಡಿಟ್ಯಾಚ್‌ಮೆಂಟ್‌ನೊಂದಿಗೆ ಇದ್ದು ಸಮಾಜದ ಅನುಕೂಲಕ್ಕಾಗಿ ತಮ್ಮ ಸಮಯ ಕೊಡಬೇಕು. ಆಗಲೇ ಬದುಕಿದ್ದಕ್ಕೆ ಸಾರ್ಥಕ ಎಂದು ನೆರೆದಿದ್ದ ಯುವಕರಿಗೆ ಮನದಟ್ಟಾಗುವಂತೆ ಮಾತನಾಡಿದರು. ಈಗಿನ ಯುವಕರೂ ಸಹ ಈ ಬಗ್ಗೆ ಕಾರ್ಯಪ್ರವೃತ್ತರಾಗಬೇಕು. ಇದಕ್ಕೆ ಪೋಷಕರ ಬೆಂಬಲವೂ ಸಹ ಬೇಕಾಗುತ್ತದೆ ಎಂದರು.

ಅವರು ತಮ್ಮ ಮಾತನ್ನು ಮುಂದುವರೆಸುತ್ತಾ, ಕೆಲವು ಕೇಸ್ ಸ್ಟಡೀಸ್‌ಗಳ ಬಗ್ಗೆ ಹೇಳಿದರು. ಉದಾಹರಣೆಗೆ ಬೇಡ, ಡಕಾಯಿತನಾಗಿದ್ದ ವಾಲ್ಮೀಕಿ, ನಾರದರ ಪ್ರವೇಶದಿಂದ, ಕ್ರೌಂಚ ಪಕ್ಷಿಗಳಿಂದ ಪ್ರೇರಿತನಾಗಿ, ಕರುಳನ್ನೇ ಉಸಿರಾಗಿಸಿಕೊಂಡು, ಅದ್ಭುತವಾದ ಮಹಾಕಾವ್ಯ ರಾಮಯಣದ ರಚನೆಗೆ ಕಾರಣನಾದ. ಯುವಜನರಲ್ಲಿ ಎಲ್ಲರೂ ಕೆಟ್ಟವರಿರುವುದಿಲ್ಲ. ಅವರನ್ನು ಸಮಾಜಮುಖಿಯನ್ನಾಗಿಸಬೇಕು ಅಷ್ಟೆ. ಅದಕ್ಕೆ ಅವರುಗಳ ಪರಿಶ್ರಮದ ಅಗತ್ಯವೂ ಇದೆ ಎಂದರು.

ಕೇವಲ 3 ನೇ ತರಗತಿ ಓದಿ, ಕಳ್ಳನಾಗಿ, ಜೈಲುವಾಸ ಅನುಭವಿಸಿ, ಹೊರಗಡೆ ಬಂದಂತಹ ಆಟೋರಾಜ, ನಾಯಿಗಿಂತ ಕಡೆಯಾಗಿ ದೈನ್ಯ ಸ್ಥಿತಿಗೆ ಇಳಿಯುತ್ತಾನೆ. ತಂದೆ ಕೇವಲ ರೂ. 1000 ಕೊಟ್ಟು ನಿನ್ನ ಜೀವನ ನೋಡಿಕೋ ಎನ್ನುತ್ತಾರೆ. ಆರಂಭದಲ್ಲಿ ಬೆಂಗಳೂರಿನಲ್ಲಿ ಜೀವನ ಬಹಳ ಕಷ್ಟವಾಗಿ ಪರಿಣಮಿಸುತ್ತದೆ. ಭಿಕ್ಷೆ ಬೇಡುತ್ತಾನೆ. ಆಗ ಭಿಕ್ಷುಕರ ಕಷ್ಟಗಳನ್ನು ನೋಡಿ ನಿಧಾನವಾಗಿ ಶ್ರಮಪಟ್ಟು ಆಟೋವನ್ನು ಖರೀದಿಸಿ, ಭಿಕ್ಷೆ ಬೇಡುವವರಿಗಾಗಿಯೇ ಒಂದು ಅನಾಥಾಶ್ರಮವನ್ನು ಆರಂಭಿಸಿ, ಮಂತ್ರಿಯೊಬ್ಬರ ಸಹಕಾರ ಪಡೆದು ಪ್ರಾರಂಭಿಸಿದ ಆಶ್ರಮ ಈಗ ಚೆನ್ನಾಗಿದೆ ಹಾಗೂ ಉತ್ತಮಸೇವೆ ಮಾಡುತ್ತಿದೆ ಎಂದರು. ಬೆಂಗಳೂರಿನ ದೊಡ್ಡಗುಬ್ಬಿಯಲ್ಲಿ ಹೋಪ್‌ಆಫ್ ಹೋಪ್ ಎಂಬ ಅನಾಥಾಶ್ರಮ 4000 ಜನ ಭಿಕ್ಷುಕರಿಗೆ ಸೇವೆ ಮಾಡಿದೆ. 350 ಜನ ನಿರಾಶ್ರತರಿಗೆ ತಾಣ ಒದಗಿಸಿದೆ. ಈಗ ಅವನನ್ನು ಎಲ್ಲರೂ ಅಲ್ಲಿ ಡ್ಯಾಡಿ ಎನ್ನುತ್ತಾರೆ. ಈ ಕಥೆಗಳನ್ನು ಕೇಳಿದಾಗ ಕಣ್ಣುಗಳು ತೇವವಾಗುತ್ತವೆ. ಇಂಥಹ ನೈಜ ಘಟನೆಗಳನ್ನು ಮನಗಂಡು ನಮ್ಮ ಯುವ ಜನರ ಮನ ಪರಿವರ್ತನೆಯಾಗಿ ಏಕೆ ಯುವಕರು ಸಮಾಜ ಮುಖಿಯಾಗಬಾರದು. ಅನಾಥರಿಗೆ ಯಾಕೆ ನೆರವಾಗಬಾರದು ಎಂದರು.

ಇನ್ನೊಬ್ಬ ಸಣ್ಣದಾದ ವ್ಯಾಪಾರ ಮಾಡುತ್ತಾ ನೂರಾರು ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವನ್ನು ನೀಡುತ್ತಾ ತನ್ನ ಜೀವನವನ್ನು ಮುಂದುವರಿಸಿದ್ದಾನೆ. ತಾನು ಏನೂ ಇಲ್ಲದೇ ಇದ್ದಾಗ ಹಲವರ ನೆರವಿನಿಂದ ಡಿಎಡ್ ಮಾಡಲು ಕಾರಣವಾಗಿದ್ದು, ತಾನೂಯಾಕೆ ಪರಿವರ್ತನೆ ಯಾಗಬಾರದು, ಸಮಾಜಕ್ಕೆ ನೆರವಾಗಬಾರದು ಎಂದು ಯೋಚಿಸಿ ತನ್ನ ದುಡಿಮೆಯ ಒಂದು ಭಾಗವನ್ನು ಸಮಾಜಕ್ಕೆ ದಾನ ಮಾಡ್ತಾನೆ. ತನ್ಮೂಲಕ ಸಮಾಜದ ಋಣವನ್ನು ತೀರಿಸಿಕೊಂಡ ಎಂದರು.

ಮುಂದುವರೆದ ಮುಖ್ಯ ಅತಿಥಿಗಳಾದ ಪ್ರೊ.ಎನ್. ದಿವಾಕರರಾವ್ ರವರು, ಧರ್ಮಸ್ಥಳ ಸಂಘ, ಹೆಣ್ಣು ಮಕ್ಕಳಿಗೆ ಏನೇನು ಕಾರ್ಯ ಯೋಜನೆಗಳನ್ನು ಮಾಡಿದೆ ಎಂದು ತಿಳಿಸಿದ ಅವರು, ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ ಸಮಾಜದಲ್ಲಿ ಕೆಲವು ಕಾರ್ಯಗಳಾಗುತ್ತಿದೆ. ಬೆಂಗಳೂರಿನಲ್ಲಿರುವ ಮಹಾದೇವ ಎನ್ನುವವನು ಸಾವಿರಾರು ಅನಾಥವಾದ ಶವಗಳನ್ನು ಮುಕ್ತಿಗೊಳಿಸಿದ್ದಾನೆ. ಇವಕ್ಕೆಲ್ಲಾ ಪ್ರೇರಣೆ ಹೇಗೆ ಬಂತು ಎಂಬುದನ್ನೂ ಸಹ ವಿವರಿಸಿದರು. ಅವನಿಗೂ ಸಹ ಸಂಸಾರವಿದೆ ಒಬ್ಬ ಮಗನಿದ್ದಾನೆ. ರಾಜ್ಯ ಸರ್ಕಾರದ ಪ್ರಶಸ್ತಿ ಬಂದಿದೆ. ರಾಷ್ಟ್ರಪತಿಗಳಾದ ಡಾ.ಅಬ್ದುಲ್ ಕಲಾಂರವರು ಇವನ ಕೆಲಸಗಳನ್ನು ಶ್ಲಾಘಿಸಿ ಅವನಿಗೆ ಮನೆ ನಿರ್ಮಿಸಲು ರೂ.2.50 ಲಕ್ಷ ಕೊಟ್ಟಿದ್ದಾರೆ. ಇವೆಲ್ಲವೂ ಏನನ್ನು ಸೂಚಿಸುತ್ತದೆ. ಸಮಾಜದ ಬಗ್ಗೆ ಕಳಕಳಿ ಇರುವ ಯುವಕರು ಸಮಾಜಕ್ಕೆ ಅನುಕೂಲವಾದ ಕೆಲಸಗಳಲ್ಲಿ ತೊಡಗಿಕೊಳ್ಳುವ ಬಗ್ಗೆ ಚಿಂತಿಸಬೇಕಾಗಿದೆ. ಸಮಾಜದ ಸ್ವಾಸ್ಥ್ಯ ಹಾಗೂ ಕಣ್ಣೀರನ್ನು ಒರೆಸಬೇಕಾಗಿದೆ. ರೋಟರಾಕ್ಟ್‌ನ ಯುವಕರುಗಳು ಈ ನಿಟ್ಟಿನಲ್ಲಿ ಯೋಚಿಸಬೇಕು. ನಾವುಗಳು ಹೋಗುವಾಗ ಏನನ್ನೂ ಒಯ್ಯುವುದಿಲ್ಲ ಎನ್ನುವ ಗುರುತಾಗಿ ಅರ್ಧ ವಿಶ್ವವನ್ನೇ ಗೆದ್ದ ಅಲೆಕ್ಸಾಂಡರ್ ತನ್ನ ಮರಣದ ನಂತರ ತನ್ನೆರಡು ಕೈಗಳನ್ನು ಹೊರಚಾಚಿಸಿರಿ ಎಂದದ್ದನ್ನು ಮನಗಾಣಬೇಕಾಗಿದೆ.

ಇವೆಲ್ಲ ಕಾರ್ಯಗಳಿಗಾಗಿ ನೂರು ಜನರಲ್ಲಿ ಒಬ್ಬರು ಸಿಕ್ಕರೂ ಸಾಕು. ಸಮಾಜಕ್ಕೆ ಅನುಕೂಲವಾಗುತ್ತದೆ. ವಿದ್ಯಾದಾನ ಮಾಡಿ ಅಂದರೆ ನಿಮಗೇನು ತಿಳಿದಿರುತ್ತದೋ ಅದನ್ನು ಇನ್ನೊಬ್ಬರಿಗೆ ಕಲಿಸಿಕೊಡಿ. ಸಣ್ಣ ಸಣ್ಣ ನೆರವೇ ಆಗಲಿ ಕೊಡಿ, ಇದರಿಂದ ಯಾರೋ ಒಬ್ಬರು ಪ್ರಭಾವಿತರಾಗುತ್ತಾರೆ. ತಯಾರಾಗುತ್ತಾರೆ. ಯುವ ಜನರಿಗೆ ಪ್ರೇರಣೆ ಹಾಗೂ ಅವರುಗಳನ್ನು ತಯಾರು ಮಾಡುವ ಕೆಲಸ ನಮ್ಮದಾಗಬೇಕು ಎಂದರು.

ಅಧ್ಯಕ್ಷರಾದ ರೊ.ಆರ್.ಆನಂದರವರು ಮಾತನಾಡಿ ಸತ್ಯಸಾಯಿ ಯವರ ವಾಕ್ಯ Love All Serve All ಎಂಬ ಮಾತು ರೋಟರಿಗೆ ಬಹಳ ಹತ್ತಿರವಾದ ಮಾತು. ನಿರ್ಮಲ ಮನಸ್ಸಿನಿಂದ ಯಾವುದೇ ಅಪೇಕ್ಷೆ ಇಲ್ಲದೇ ದಾನ ಮಾಡಬೇಕು ಎಂಬುದು ಹೃದಯಕ್ಕೆ ಹತ್ತಿರವಾದ ಮಾತು. ಮುಖ್ಯ ಅತಿಥಿಗಳ ಮಾತಿನಿಂದ ನಮ್ಮೆಲ್ಲರ ಜೀವನವನ್ನು ಒಂದು ತರಹ ರಿವೈಂಡ್ ಮಾಡಿಕೊಂಡ ಹಾಗಾಯಿತು. ಅವರು ಹೇಳಿದಂತೆ ಶೇ 29% ರಷ್ಟಿರುವ ಯುವ ಜನರನ್ನು ಪ್ರೇರೇಪಿಸಿ, ಹುರಿದುಂಬಿಸಿ, ಸತ್ಕಾರ್ಯ ಮಾಡಿಸುವ ಹೊಣೆ ನಮ್ಮ ಮೇಲಿದೆ ಎಂದರು. ದಿವಸಕ್ಕೆ ಒಂದು ಸಹಾಯ ಮಾಡಬೇಕು ಎಂಬ ಸಂಕಲ್ಪವನ್ನು ನಾವು ಮಾಡಬೇಕಿದೆ ಎಂದು ತಿಳಿಸಿ, ಇಂದು ಮುಖ್ಯ ಅತಿಥಿಗಳಾದ ಪ್ರೊ.ಎನ್. ದಿವಾಕರರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾರ್ಗದರ್ಶನ ಮಾಡಿದ್ದಕ್ಕಾಗಿ ಅವರಿಗೆ ವಂದನೆಗಳನ್ನು ತಿಳಿಸಿ ಕೃತಜ್ಞತಾ ಪೂರ್ವಕವಾಗಿ ನೆನಪಿನ ಕಾಣಿಕೆ ನೀಡಿದರು.

ಕೊನೆಯಲ್ಲಿ ಕಾರ್ಯದರ್ಶಿ ರೊ. ವಿಶ್ವಾಸ್ ಎಲಬುರ್ಗಿ ಸರ್ವರನ್ನು ವಂದಿಸಿದರು. ಅಲ್ಲದೇ ಅಂದು ಉಪಹಾರದ ವ್ಯವಸ್ಥೆ ಮಾಡಿದ ಮಾಜಿ ಅಧ್ಯಕ್ಷರಾದ ರೊ.ಟಿ.ಆರ್.ಅಶ್ವಥ ನಾರಾಯಣರಿಗೆ ಧನ್ಯವಾದಗಳನ್ನು ಅರ್ಪಿಸಿದರು.



## ಸಂಪಾದಕೀಯ

### ಸಿರಿವಂತಿಕೆಯೊಳಗಿನ ಬಡತನ...!

ಸುಖ ಮತ್ತು ಸಿರಿವಂತಿಕೆಗಳ ವ್ಯಾಖ್ಯಾನಗಳೇ ತೀರಾ ವೈಯಕ್ತಿಕ ಮತ್ತು ಅಪರಿಮಿತ. ಅವರವರ ದೃಷ್ಟಿಕೋನಗಳೇ ಬಾಳನ್ನು ಕಡೆದು ನಿಲ್ಲಿಸೋದು ಸತ್ಯ. ನಗರದ ಗಲಾಟೆಯಿಂದ ಆಗಾಗ ಹಳ್ಳಿಗೆ ಹೋಗಿ ಮೋಜು ಮಾಡಿ ತಿಂದುಂಡು ಹಿಂದಿರುಗಲು ಕಟ್ಟಿಕೊಂಡ ತಾಣದ ಹೆಸರೇ ಫಾರ್ಮ್ ಹೌಸ್. ಭತ್ತ ಬೆಳೆವ ಹೊಲಗದ್ದೆಗಳನ್ನು ಕೊಂಡುಕೊಂಡು ರೆಸಾರ್ಟ್‌ಗಳನ್ನು ಸ್ಥಾಪಿಸುವುದು ಕೆಲವರಿಗೆ ಅಪಾರ ಸುಖ, ಸಿರಿತನದ ವಿಚಾರ. ಬಂಡವಾಳವಿರದೆ, ಬೆಳೆ ಬೆಳೆಯಲಾರದೆ ಅಸಹಾಯಕತೆಯಿಂದ ಜಮೀನು ಮಾರುವ ಬಡರೈತರಿಗೆ ಗರಿ ಗರಿ ನೋಟುಗಳನ್ನು ಮುಟ್ಟುವುದೇ ಸುಖ.

ಹೀಗೊಬ್ಬ ತಂದೆ ತನ್ನ ಮಗನನ್ನು ತಾನು ಕೊಂಡುಕೊಂಡ ಫಾರ್ಮ್ ಹೌಸ್ ತೋರಿಸಲಿಕ್ಕೆ ಕರೆದುಕೊಂಡು ಹೋದ. ಅಲ್ಲಿ ದುಡಿಯುತ್ತಿದ್ದ ಕೆಲಸಗಾರರ ಬಡತನ ಬವಣೆ ಬೆವರು ಶ್ರಮವನ್ನು ತೋರಿಸುತ್ತ ತನ್ನ ಶ್ರೀಮಂತ ಬಾಳನ್ನು ಕೂಡಾ ಪರಿಚಯ ಮಾಡಿಕೊಡುತ್ತಿದ್ದ.

ಮಗನಿಗೆ ತಂದೆಯ ಈ ಮಾತುಗಳಾವುವೂ ಕಿವಿಗೆ ಹೋಗದೆ ಹಸಿರು ಸಿರಿ, ಹರವಿದ ಗದ್ದೆ, ತೋಟ, ಆಕಾಶ, ಮುಸ್ಸಂಜೆ, ಸೂರ್ಯ ಮುಳುಗುವಾಗ ಕಾಣುವ ಮಿನುಗುವ ತಾರೆ ಚಂದ್ರನನ್ನೇ ಎದೆಗೆ ತುಂಬಿಕೊಂಡಿದ್ದ. ತಡರಾತ್ರಿ ನಗರದಲ್ಲಿರುವ ಮನೆಗೆ ಹಿಂದಿರುಗಿದಾಗ ತಂದೆ ಮಗನಿಗೆ ಬಡತನವನ್ನು ಪರಿಚಯ ಮಾಡಿಕೊಟ್ಟ ಹಿನ್ನೆಲೆಯಲ್ಲಿ ಮಾತಿಗೆ ಕೂತ. 'ನೋಡಿದೆಯಾ ಮಗನೇ, ಬಡತನದ ಬವಣೆ ಹೇಗಿದೆ ಗೊತ್ತಾಯ್ತಾ' ಎಂದು ಪ್ರಶ್ನೆ ಮಾಡಿದ. ಅದಕ್ಕೆ ಮಗನ ವಿವರಣೆ ಅಭೂತಪೂರ್ವವಾಗಿತ್ತು.

'ಇಷ್ಟು ಹಣ, ಕಾರು, ಬಂಗಲೆ ಇದ್ದರೂ ನಮ್ಮ ಮನೆಯಲ್ಲಿ ಒಂದೇ ನಾಯಿಮರಿ. ಅವರ ಬಳಿ ಹತ್ತಾರು ನಾಯಿಗಳು, ಇಲ್ಲಿ ಕಾಂಪೌಂಡ್ ಮಧ್ಯೆ ಸಣ್ಣ ಈಜುಕೊಳ. ಅಲ್ಲಿ ಅವರ ಗುಡಿಸಲ ಎದುರು ಹರಿವ ನಾಲೆ. ಇಲ್ಲಿ ಬೆಲೆ ಬಾಳುವ ಗಾಜಿನ ದೊಡ್ಡದೀಪ, ಅಲ್ಲಿ ಹೊರಗೆ ಮಲಗಿದರೆ ಸಹಸ್ರಾರು ತಾರೆಗಳು. ಇಲ್ಲಿ ಮನೆಯ ಆವರಣಕ್ಕೆ ಗೋಡೆ ಇದೆ. ಅವರ ಮನೆಯ ಎದುರು ಕಣ್ಣು ಚಾಚಿದಷ್ಟೂ ಹೊಲಗದ್ದೆ ಬಯಲು. ನಾವು ಸಣ್ಣ ಚೌಕಟ್ಟಿನ ಸೈಟಿನೊಳಗೆ ಬಾಳ್ತಾ ಇದೀವಿ. ಅವರು ಇಡೀ ಬಯಲಿನಲ್ಲಿ ಓಡಾಡುತ್ತಾರೆ. ನಮಗಿಂತ ಅವರು ಸಿರಿವಂತರು ಅಪ್ಪ' ಅಂತೆಲ್ಲ ವಿವರಿಸುವ ಮಗನ ಕಂಡಾಗ ತಂದೆ ಕಕ್ಕಾಬಿಕ್ಕಿ. ತನ್ನ ಮಗನಿಗೆ ಬಡ ರೈತ ಕಾರ್ಮಿಕರ ಬಾಳನ್ನು ತೋರಿಸಲು ಹೊರಟ ತಂದೆಗೆ ಸಿರಿವಂತಿಕೆಯ ನಿಜವಾದ ಅಂತರಾರ್ಥವನ್ನು ವಿವರಿಸಿದ್ದ.

ಬೇಂದ್ರೆಯವರು 'ನಾನು ಬಡವಿ, ಆತ ಬಡವ – ಒಲವೇ ನಮ್ಮ ಬದುಕು' ಕವಿತೆ ಕೂಡಾ ಸಿರಿವಂತಿಕೆಯ ಡೋಂಗಿತನವನ್ನು ಬಣ್ಣಿಸುತ್ತದೆ. ಬಾಳಿನಲ್ಲಿ ಅದಕು–ಇದಕು–ಎದಕು ಬಳಸಿಕೊಂಡ ಒಲವನ್ನು ಕವಿ ಆರಾಧಿಸುತ್ತಾರೆ.

• **ರೊ. ಎಂ. ಮಾಧವಾಚಾರ್**



**ಕೋಟೇಶ್ವರದಲ್ಲಿ ನಡೆದ 'ಜ್ಞಾನ ವಲ್ಲರಿ–2026' ಡಿಸ್ಟ್ರಿಕ್ಟ್ ಅಸೆಂಬ್ಲಿಯಲ್ಲಿ ಭಾಗವಹಿಸಿದ್ದ ನಮ್ಮ ಕ್ಲಬ್‌ನ ಸದಸ್ಯರುಗಳು**

**ಮಾರ್ಚ್ 2026ರ ರೋಟರಿ ಸೆಂಟನರಿ ಫೌಂಡೇಶನ್ ಟ್ರಸ್ಟ್‌ನ ಸಭೆಯಲ್ಲಿ ಈ ಕೆಳಕಂಡಂತೆ ಟ್ರಸ್ಟಿಗಳು ಆಯ್ಕೆಯಾಗಿರುತ್ತಾರೆ.**

| | |
|---|---|
| **ರೊ. ಎನ್.ವಿ. ಭಟ್** | **ಮ್ಯಾನೇಜಿಂಗ್ ಟ್ರಸ್ಟಿ** |
| **ರೊ. ಸೆಂಥಿಲ್ ವೇಲನ್** | **ಕಾರ್ಯದರ್ಶಿ** |
| **ರೊ. ಎಸ್. ಮಂಜುನಾಥ್** | **ಖಜಾಂಚಿ** |

**ಟ್ರಸ್ಟೀಸ್ :**

| | |
|---|---|
| ರೊ. ಡಾ. ಪಿ. ನಾರಾಯಣ್ | ರೊ. ಎಸ್. ದತ್ತಾತ್ರಿ |
| ರೊ. ವೀರಣ್ಣ ಎ. ಹುಗ್ಗಿ | ರೊ. ಎಸ್.ಜಿ. ಗೋಪಾಲ್ |
| ರೊ. ಕಿಶೋರ್ ಶೀರ್ನಾಳಿ | ರೊ. ವಿಜಯ್ ಕುಮಾರ್ ಸಿ. |

**ಎಕ್ಸ್ ಅಫಿಶಿಯೋ :**

ರೊ. ಆರ್. ಆನಂದ್, ಪ್ರೆಸಿಡೆಂಟ್
ರೊ. ಎನ್. ಗೋಪಿನಾಥ್, ಪ್ರೆಸಿಡೆಂಟ್ ಎಲೆಕ್ಟ್
ರೊ. ವಿಶ್ವಾಸ್ ಯಲಬುರ್ಗಿ, ಕಾರ್ಯದರ್ಶಿ

**ಸ್ಪೆಷಲ್ ಇನ್‌ವೈಟೀಸ್ :**

| | |
|---|---|
| ರೊ. ಕೆ. ಸೂರ್ಯನಾರಾಯಣ ಉಡುಪ | ರೊ. ಎ. ಮಂಜುನಾಥ್ |
| ರೊ. ಹೆಚ್. ಎಸ್. ಮೋಹನ್ | ರೊ. ಎನ್.ಎಸ್. ಶ್ರೀಧರ್ |



**ಮುದ್ದುರಾಮನ ಚೌಪದಿ...**

**ಕಾಡಮೂಲೆಯಲೊಂದು ಗಮನ ಬೇಡದೆ ಇನಿತು**
**ಬಿರಿದು ನಗುತಿದೆ ನೋಡು ಹೂ ಮೌನದಲ್ಲಿ !**
**ಬಿಂಕಬಿಗುಮಾನಗಳ ಸೋಂಕಿಲ್ಲ ಈ ಸುಮಕೆ**
**ನಕ್ಕು ಅಳಿವುದೆ ಲೇಸು – ಮುದ್ದುರಾಮ.**

## *Happy Birthday*



*Veeranna A. Huggi*
*25th May*



*Mahadev K.M.*
*25th May*



*Narendra Jain*
*25th May*

## *Wedding Anniversary*

| | |
|---|---|
| *Ganesh H.C. & D.Geetha* | *1st May* |
| *N.H.Prabhakar & Anuradha* | *3rd May* |
| *Dr.Rajaram & Sapna* | *5th May* |
| *Srikanth Nadig & Shruthi* | *10th May* |
| *H.S.Raghuram Bhatt & Bhargavi Bhatt* | *10th May* |
| *M. Madhavachar & Sudha Madhu* | *11th May* |
| *UmeshShenoy K & Latha V. Shenoy* | *16th May* |
| *Rajendraprasad G.E. &Suchitha B.R* | *17th May* |
| *N.V.Bhatt & Bhargavi Bhatt* | *18th May* |
| *Dr. Narayana Panji & Dr. Sandhya* | *21st May* |
| *Ajaykumarpete & Smt. Vidya* | *29th May* |
| *Veeranna A. Huggi & Usha Devi* | *31st May* |

To,

Book Post

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495